

# ಕಲೆಯ ಪರಾಕಾಷ್ಠೆಯ ವೆಲ್ಲೂರಿನ ಕಲ್ಯಾಣ ಮಂಟಪ

ವಿಜಯನಗರೋತ್ತರ ನಿರ್ಮಾಣಗಳಲ್ಲೇ ಅತ್ಯಂತ ಶ್ರೇಷ್ಠವಾದ ಕಲಾವೈಭವ ಕಂಡುಬರುವುದು ವೆಲ್ಲೂರಿನ ಕೋಟೆಯಲ್ಲಿರುವ ಜಲಕಂಠೇಶ್ವರ ದೇಗುಲದ ಕಲ್ಯಾಣ ಮಂಟಪದಲ್ಲಿ. ಜೀವತಳೆದು ಬಂದಂತೆ ಕಾಣುವ ಇಲ್ಲಿನ ಶಿಲ್ಪಗಳು ಕಲಾವಿದನ ಕೈಚಳಕಕ್ಕೆ ಕನ್ನಡಿ ಹಿಡಿದಿವೆ. ದಕ್ಷಿಣ ಭಾರತದಲ್ಲೇ ಅತ್ಯಂತ ಸುಂದರ ಮಂಟಪ ಇದೆಂದು ಕರೆಸಿಕೊಂಡಿದೆ.

■ ಬಿ.ಎಂ. ಚಂದ್ರಶೇಖರಯ್ಯ

ಕರ್ನಾಟಕ ಸಾಮ್ರಾಜ್ಯ 1565ರಲ್ಲಿ ರಕ್ಕಸ ತಂಗಡಿಯಲ್ಲಿ ಷಾಹಿ ಸುಲ್ತಾನರೊಡನೆ ನಡೆದ ಯುದ್ಧದಲ್ಲಿ ಶೋಚನೀಯವಾಗಿ ಸೋತ ಮೇಲೆ ಅದರ ರಾಜಧಾನಿ ವಿಜಯನಗರ ದಾಳಿಕೋರರು, ಕಳ್ಳರು, ದರೋಡೆಕಾರರಿಂದ ಲೂಟಿಯಾಯಿತಲ್ಲದೆ ನೆಲಸಮವಾಯಿತು. ಅಮೋಘ ದೇವಾಲಯಗಳನ್ನು, ಬೃಹತ್ ದೇವತಾಮೂರ್ತಿಗಳನ್ನು ವಿರೂಪಗೊಳಿಸಲಾಯಿತು. ಹೀಗೆ 15–16ನೇ ಶತಮಾನದ ಅತ್ಯಂತ ಸುಂದರ, ಜನಬಾಹುಳ್ಯದ ನಗರವು ಹೇಳಹೆಸರಿಲ್ಲದಂತೆ ಹಾಳಾಗಿ ‘ಹಾಳು ಹಂಪೆ’ಯಾಯಿತು!.

ಯುದ್ಧಭೂಮಿಯಿಂದ ಹಿಂದಿರುಗಿದ ತಿರುಮಲರಾಯನು ರಾಜ್ಯದ ಭಂಡಾರ ಮತ್ತು ಅರಮನೆ ಸ್ತ್ರೀಯರನ್ನು ಕರೆದುಕೊಂಡು ದೂರದ ಪೆನುಗೊಂಡೆಗೆ ಹೊರಟುಹೋದನು. ಅಂದಿನಿಂದ ಪೆನುಗೊಂಡವೇ ಕರ್ನಾಟಕ ಸಾಮ್ರಾಜ್ಯದ ರಾಜಧಾನಿಯಾಯಿತು. ಸದಾಶಿವರಾಯನನ್ನೇ ಸಾಮ್ರಾಟನನ್ನಾಗಿ ಮುಂದುವರೆಸಲಾಯಿತು.

ಈ ರೀತಿ ಅವನತಿಗೀಡಾದ ಸಾಮ್ರಾಜ್ಯದ ವಿವಿಧ ರಾಜ್ಯಗಳ ಸಾಮಂತರು ನಿಧಾನವಾಗಿ ತಮ್ಮ ತಮ್ಮ ಪ್ರಾಂತ್ಯಗಳಿಗೆ ತಾವೇ ರಾಜರೆಂದು ಬಗೆದು ಸ್ವತಂತ್ರವಾಗಿ ಅಧಿಕಾರ ನಡೆಸತೊಡಗಿದರು. ಅದರಲ್ಲೂ ದಕ್ಷಿಣದಲ್ಲಿ ಮಧುರೆಯ ನಾಯಕರು ತಾವು ಸ್ವತಂತ್ರರಂತೆಯೇ ವರ್ತಿಸುತ್ತಿದ್ದರು. ಆಗಲೇ ದೇವಾಲಯಗಳ ನಿರ್ಮಾಣ ಚಟುವಟಿಕೆಗಳನ್ನು ಮುಂದುವರೆಸಿದರು. ದೇವಾಲಯಗಳಲ್ಲಿ ಸಭಾಭವನಗಳು, ಕಲ್ಯಾಣ ಮಂಟಪಗಳು, ರಾಯಗೋಪುರಗಳನ್ನು ನಿರ್ಮಿಸತೊಡಗಿದರು.

ವೆಲ್ಲೂರಿನ ಕೋಟೆಯಲ್ಲಿರುವ ಜಲಕಂಠೇಶ್ವರ ದೇವಾಲಯದಲ್ಲಿ ನಿರ್ಮಿಸಿರುವ ಕಲ್ಯಾಣ ಮಂಟಪವು ವಿಜಯನಗರೋತ್ತರ ನಿರ್ಮಾಣಗಳಲ್ಲೇ ಅತ್ಯಂತ ಶ್ರೇಷ್ಠವಾದುದು. ಅದು ಬಹುಶಃ ಚಕ್ರವರ್ತಿ ಸದಾಶಿವರಾಯನ (ಕ್ರಿ.ಶ. 1540–1572) ಆಳ್ವಿಕೆಯ ಕೊನೆಯ ಅವಧಿಯಲ್ಲಿ ನಿರ್ಮಾಣವಾಗಿದೆ. ಅತ್ಯಂತ ಸುಂದರವಾದ ಈ ಮಂಟಪದ ಸಂಕೀರ್ಣ, ಮೂರ್ತಿ, ಶಿಲ್ಪಕಲೆ ಮತ್ತು ಹೂ, ಹೂಬಳ್ಳಿಗಳ ವಿನ್ಯಾಸಗಳಿಂದ ಕೂಡಿದ್ದು, ಅದಕ್ಕೆ ಸರಿಸಾಟಿಯಾದ ನಿರ್ಮಾಣವನ್ನು ಬೇರೆಲ್ಲಿಯೂ ಕಾಣಲು ಸಾಧ್ಯವಿಲ್ಲ.

ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿ ಆಡಳಿತ ನಡೆಸುತ್ತಿದ್ದಾಗ ಅದರ ಗವರ್ನರುಗಳಲ್ಲೊಬ್ಬನು ಆಕಸ್ಮಿಕವಾಗಿ ಈ ಕಲ್ಯಾಣ ಮಂಟಪ ನೋಡಿ ಅದರ ಸೌಂದರ್ಯಕ್ಕೆ ಮನಸೋತು ಕೂಡಲೇ ಅದನ್ನು ಲಂಡನ್‌ನಲ್ಲಿರುವ ಬ್ರೈಟನ್ ಮ್ಯೂಸಿಯಂಗೆ ವರ್ಗಾಯಿಸಬೇಕೆಂಬ ದುರಾಸೆ ಅವನ ಮನಸ್ಸಿನಲ್ಲಿ ಮೂಡಿತು. ಕಲ್ಯಾಣ ಮಂಟಪವನ್ನು ಮುರಿದು ಕಟ್ಟಬಹುದೆಂಬುದು ಆತನ ಯೋಚನೆಯಾಗಿತ್ತು.